ದಿನಾಂಕಃ 08-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ 2 ರವರ ಪರ ವಕೀಲರಿಂದ,

1) ಪ್ರತಿವಾದಿ 1 ರವರು ನನ್ನ ಮಗಳು ಎಂದರೆ ಸರಿ. ನನ್ನ ತಂದೆಯ ಹೆಸರು ಚೌಡನಾಯಕ ಮತ್ತು ನನ್ನ ತಾಯಿಯ ಹೆಸರು ನಿಂಗಮ್ಮ. ನನ್ನ ಅಣ್ಣನ ಹೆಸರು ಚೌಡನಾಯಕ. ಚೌಡನಾಯಕನ ಹೆಂಡತಿಯ ಹೆಸರು ಪುಟ್ಟನಿಂಗಮ್ಮ. ಚೌಡನಾಯಕ ಮತ್ತು ಪುಟ್ಟನಿಂಗಮ್ಮ ರವರ ದಾಂಪತ್ಯ ಜೀವನದಿಂದ ಸಂತಾನ ಇರುವುದಿಲ್ಲ. ನಾನು ಈಗ ಅರಕೆರೆ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನಗೆ ಆಧಾರ್ ಕಾರ್ಡ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನಾಗವಾಲ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕಿನಲ್ಲಿ ವಾಸವಾಗಿರುತ್ತೇನೆ.

2) ನಮ್ಮ ಕುಟುಂಬದ ವಂಶಸ್ಥರ ಬಗ್ಗೆ ಹೇಳಲು ಬರುವುದಿಲ್ಲ. ವಂಶವೃಕ್ಷ ಪತ್ರವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಚೌಡನಾಯಕ ನನ್ನ ಸ್ವಂತ ಅಣ್ಣ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಚೌಡನಾಯ ರವರಿಗೆ ಒಂದೇ ಹೆಂಡತಿ. ನನ್ನ ತಂದೆಯನ್ನು ಚೌಡನಾಯಕ ಎಂದು ಮಾತ್ರ ಕರೆಯುತ್ತಿದ್ದರು. ನನ್ನ ಅಣ್ಣ ಚೌಡನಾಯಕ ರವರನ್ನು ಕುಂಟರಾಯ ಎಂದು ಕರೆಯುತ್ತಿದ್ದರು. ನಾನು ನಿಶಾನೆ ಪಿ-04 ರ ಆದೇಶದಂತೆ ಸರಿಯಾದ ವಂಶವೃಕ್ಷ ನೀಡದ ಕಾರಣ ವಜಾ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆ ಚೌಡನಾಯಕ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಹೋದರರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

3) ಪೂಜಾರಿ ಸಿದ್ದನಾಯಕ ಎಂಬುವವರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 2 ರವರು ಅರೆಕೆರೆ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಚೌಡನಾಯಕ ಮತ್ತು

ಪುಟ್ಟನಿಂಗಮ್ಮ ರವರ ಜಮೀನನ್ನು 2 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಚೌಡನಾಯಕ ಮತ್ತು ಪುಟ್ಟನಿಂಗಮ್ಮರವರು ತೀರಿಕೊಂಡಾಗ ಅವರ ಅಂತ್ಯಕ್ರಿಯೆಗಳನ್ನು 2 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚೌಡನಾಯಕ ಮತ್ತು ಪುಟ್ಟನಿಂಗಮ್ಮ ರವರ ಮನೆಯ ಪಕ್ಕದಲ್ಲಿ ಇರುವ ಮನೆಯಲ್ಲಿ 2 ನೇ ಪ್ರತಿವಾದಿ ವಾಸವಾಗಿರುತ್ತಾರೆ. 1 ನೇ ಪ್ರತಿವಾದಿ ತನ್ನ ಗಂಡ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಚೌಡನಾಯಕ ಮತ್ತು ಪುಟ್ಟನಿಂಗಮ್ಮ ರವರ ಜೊತೆಯಲ್ಲಿ ವಾಸವಾಗಿರುವುದಿಲ್ಲ. ಚೌಡನಾಯಕ ಮತ್ತು ಪುಟ್ಟನಿಂಗಮ್ಮ ರವರು ನನಗೆ ನೇರವಾದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹುಳಕನಾಯಕ ರವರು ಚೌಡನಾಯಕ ರವರ ಸಂಬಂಧಿಕರು. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಲುತೊಂದರೆ ಇರುವುದಿಲ್ಲ. ಹುಳಕನಾಯಕ ರವರು ನನಗೆ ಗೊತ್ತಿರುವುದಿಲ್ಲ. ಹುಳಕನಾಯಕ ರವರು ಚೌಡನಾಯಕ ಮತ್ತು ಪುಟ್ಟನಿಂಗಮ್ಮ ರವರ ತಾತ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ